ಕನ್ನಡಪ್ರಭ

Online Newspaper Clipping Service

**Dtd- Saturday, 23rd, March- 2019**

**Page No.05**

# ಇಂದು ದೇವರಾಜ ಅರಸ್ ಶಿಕ್ಷಣ ಸಂಸ್ಥೆ ಘಟಿಕೋತ್ಸವ

**ಕೋಲಾರ:** ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗೆ ಕಳೆದ ಸಾಲಿನಲ್ಲಿ ಅತಿ ಹೆಚ್ಚು ಅಂಕಗಳಿಸಿದ 5 ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಹಾಗೂ ಓರ್ವ ಎಂಬಿಬಿಎಸ್ ವಿದ್ಯಾರ್ಥಿ ಸೇರಿದಂತೆ 6 ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ವಿತರಿಸಲಾಗುವುದು ಎಂದು ಸಂಸ್ಥೆಯ ಉಸ್ತುವಾರಿ ಕುಲಪತಿ ಡಾ.ಎ.ವಿ.ಎಂ.ಕುಟ್ಟಿ ತಿಳಿಸಿದರು.

ನಗರ ಹೊರವಲಯದ ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಶನಿವಾರ ಬೆಳಗ್ಗೆ 11 ಗಂಟೆಗೆ 9ನೇ ಘಟಿಕೋತ್ಸವವನ್ನು ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಂಡಿದೆ. ಸಮಾರಂಭದ ಮುಖ್ಯ ಅತಿಥಿಗಳಾಗಿ ಬೆಂಗಳೂರು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ ಪ್ರೊ.ಬಿ.ಎನ್.ಗಂಗಾಧರ್ ಭಾಗವಹಿಸುವರು. ವಿಶ್ವವಿದ್ಯಾಲಯದ ಒಟ್ಟು 217 ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳಲ್ಲಿ ಪದವಿಗಳನ್ನು ಪ್ರಧಾನ ಮಾಡಲಾಗುವುದು ಎಂದರು.

ಎಸ್‌ಡಿಯುಎಂಸಿ ಪ್ರಾಂಶುಪಾಲ ಡಾ.ಪಿ.ಎನ್.ಶ್ರೀರಾಮುಲು ಮಾತನಾಡಿ, ಪದವಿ ವಿತರಣಾ ಹಾಗೂ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭ ಹಾಗೂ ವಿವಿಧ ಚಟುವಟಿಕೆಗಳ ಕಾರ್ಯಕ್ರಮವನ್ನು ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದರು.

## 217 ವಿದ್ಯಾರ್ಥಿಗಳಲ್ಲಿ ಪದವಿ ಪ್ರದಾನ

ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಸಿ.ಮುನಿನಾರಾಯಣ ಮಾತನಾಡಿ, ವಿಶ್ವವಿದ್ಯಾಲಯದ 217 ವಿದ್ಯಾರ್ಥಿಗಳಲ್ಲಿ ಪಿಎಚ್.ಡಿ 2, ಫೆಲೋಶಿಪ್ 2, ಸ್ನಾತಕೋತ್ತರ ಪದವಿ 55, ಸ್ನಾತಕೋತ್ತರ ಡಿಪ್ಲೋಮಾ 19, ಎಂಬಿಬಿಎಸ್ ಪದವಿ 109, ಸ್ನಾತಕೋತ್ತರ ಡಿಪ್ಲೋಮಾ ಯೋಗಾ ಪ್ರಾಕ್ಟೀಸ್ 3, ಎಂಎಸ್ಸಿ, ಎಂಎಲ್‌ಟಿ 2 ಹಾಗೂ ಬಿಎಸ್ಸಿ, ಅಲೈಡ್ ಹೆಲ್ತ್ ಸೈನ್ಸ್ 25 ವಿದ್ಯಾರ್ಥಿಗಳಿಗೆ ಪದವಿಗಳನ್ನು ಪ್ರಧಾನ ಮಾಡಲಾಗುವುದು ಎಂದರು.

ಡಾ.ಪಾಂಡೆ ಸ್ವಾತಿ(ಎಂ.ಡಿ ರೋಗ ಲಕ್ಷಣ ಶಾಸ್ತ್ರ ವಿಭಾಗ), ಡಾ.ನಿಖಿಲ್ (ಎಂ.ಡಿ ಅರವಳಿಕೆ ಶಾಸ್ತ್ರ ವಿಭಾಗ), ಡಾ.ಪೂನಾಗುಜಾಲಿ ಲಿಸ್ಸನ್ (ಎಂ.ಎಸ್ ಗರ್ಭಿಣಿ ಮತ್ತು ಸ್ತ್ರೀ ರೋಗ ಶಾಸ್ತ್ರ ವಿಭಾಗ), ಡಾ.ಅಪೂರ್ವ (ಡಿಪ್ಲೋಮಾ ಅರವಳಿಕೆ ಶಾಸ್ತ್ರ), ಡಾ.ಆರ್.ಪ್ರದೀಪ್ ಕೃಷ್ಣ (ಡಿಪ್ಲೋಮಾ ಕಿವಿ, ಮೂಗು ಮತ್ತು ಗಂಟಲು ಶಾಸ್ತ್ರ) ಹಾಗೂ ಡಾ.ಅಭಿನಯ ರವಿಚಂದ್ರನ್(ಎಂಬಿಬಿಎಸ್) ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಎಂ.ಎಸ್.ರಾಮಯ್ಯ ವಿಜ್ಞಾನ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎಂ.ಆರ್.ಜಯರಾಮ್, ಎಸ್‌ಡಿಯುಎಎಚ್‌ಆರ್ ಕುಲಾಧಿಪತಿ ಡಾ.ಎಸ್.ಕುಮಾರ್ ಸಂಸ್ಥೆಯ ಆಡಳಿತ ಮಂಡಳಿ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಭಾಗವಹಿಸುವರು. ಇದೇ ಸಂದರ್ಭದಲ್ಲಿ ಕಾಲೇಜ ಸಂಕೀರ್ಣ ಬಿಡುಗಡೆ ಮಾಡಲಾಗುವುದು. ಅಲ್ಲದೇ ಪ್ರಸಕ್ತ ಸಾಲಿನಲ್ಲಿ ಅತ್ಯುತ್ತಮ ಪ್ರತಿಭಾವಂತ ವಿದ್ಯಾರ್ಥಿಯಾಗಿ ಆಯ್ಕೆಯಾದ ಡಾ.ಮನಾಜ್ ಸುಲ್ತಾನ ಸೇರಿದಂತೆ 19 ಚಿನ್ನ ಪದಕಗಳನ್ನು ವಿತರಿಸಲಾಗುವುದು.

ಡಾ.ಅಭಿನಯಾ ರವಿಚಂದ್ರನ್ 4, ಡಾ.ತಂಗಚೊನ್ ಕೀಟ್ 3, ಡಾ.ಮನಾಜ್ ಸುಲ್ತಾನ, ಅಜೀಮ್ 2, ಡಾ.ಲಯೂ ಲಿ ಸೈಂಗ್ 2, ಡಾ.ವಿಷ್ಣು ಪ್ರಿಯ, ಡಾ.ಜೇನ್‌ಸ್ಟೈಚಾನ್, ಡಾ.ಮೃದುಲಾ ಸೇರಿದಂತೆ ಮೂರು ಮಂದಿ ತಲಾ 1 ಚಿನ್ನದ ಪದಕ ಗಳಿಸಿದ್ದಾರೆ ಎಂದು ತಿಳಿಸಿದರು

ಕ್ರೀಡೆಯಲ್ಲಿ ಡಾ.ಧ್ರುವಕುಮಾರ್ ರೆಡ್ಡಿ ಮತ್ತು ಡಾ.ಶ್ರಾವ್ಯ ಮೋನಿಕಾ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಡಾ.ಪ್ರಖ್ಯಾತ್, ಡಾ.ರುಚಿರ್ ಉತ್ತಮ್ ಮತ್ತು ಡಾ.ನಳಿ ಶಿರೀಷಾ ಅವರಿಗೆ ಚಿನ್ನದ ಪದಕ ಪ್ರಧಾನ ಮಾಡಲಾಗುವುದು. ಅಲ್ಲದೇ ಕೋಲಾರ ಗೌರಿಪೇಟೆಯ ನಿವಾಸಿ ನಿವೃತ್ತ ಬಿಇಎಂಎಲ್ ನೌಕರ ಗೋಪಾಲ್ ಮತ್ತು ತಾಯಿ ದೇವಕುಮಾರಿ ಅವರ ಪುತ್ರಿ ಡಾ.ನಿಖಿಲಾ ಅನೇಸ್ತೇಷಿಯಾ ವಿಷಯದಲ್ಲಿ ಎಂ.ಡಿ ಮಾಡಿ ಚಿನ್ನದ ಪದಕ ಗಳಿಸಿದ್ದಾರೆ ಎಂದರು.

ಕುಲಸಚಿವ ಡಾ.ಕೆ.ಎನ್.ವಿ.ಪ್ರಸಾದ್, ಆಸ್ಪತ್ರೆಯ ಅಧೀಕ್ಷಕ ಡಾ.ವಿ.ಲಕ್ಷ್ಮಯ್ಯ, ಉಪ ಪ್ರಾಂಶುಪಾಲ ಕೆ.ಎನ್.ಶಶಿಧರ್, ಡೀನ್ ಡಾ.ಬೀನಾ, ಸಿ.ಕೆ.ರಾಜನ್ ಇದ್ದರು.

ಕೋಲಾರಪತ್ರಿಕೆ

# ದೇವರಾಜ ಅರಸ್ ವೈದ್ಯಕೀಯ ವಿ.ವಿ. ೯ನೇ ಘಟಿಕೋತ್ಸವ

ಕೋಲಾರ ಹೊರವಲಯದ ಟಮಕದ ದೇವರಾಜ ಅರಸ್ ವೈದ್ಯಕೀಯ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಇಂದು ಬೆಳಿಗ್ಗೆ ೧೧-೦೦ ಘಂಟೆಗೆ ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಕುಲಾಧಿಪತಿ ಪ್ರೊ|| ಡಾ|| ಎಸ್. ಕುಮಾರ್ ಅಧ್ಯಕ್ಷತೆಯಲ್ಲಿನ ೯ನೇ ಘಟಿಕೋತ್ಸವ ಸಮಾರಂಭದಲ್ಲಿ ಬೆಂಗಳೂರಿನ ನಿಮ್ಹಾನ್ಸ್‌ನ ನಿರ್ದೇಶಕ ಬಿ.ಎನ್. ಗಂಗಾಧರ್‌ರಿಂದ ಘಟಿಕೋತ್ಸವ ಭಾಷಣ.

ಸಂಸ್ಥೆಯ ಉಸ್ತುವಾರಿ ಕುಲಪತಿ ಪ್ರೊ|| ಡಾ|| ಎ.ವಿ.ಎಂ. ಕುಟ್ಟಿ, ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ರಾಜೇಶ್ ಎನ್. ಜಗದಾಳೆ ಮುಖ್ಯ ಅತಿಥಿಗಳು.